**OS 41/2018** **DW-2**

**<u>ಸಾಕ್ಷಿಗೆ ದಿನಾಂಕ 04-07-2025ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು</u>**

**<u>ಮುಖ್ಯ ವಿಚಾರಣೆ ಪ್ರತಿವಾದಿ ಪರ ಶ್ರೀಮತಿ ವ್ಹಿ.ಆರ್.ಕೆ. ವಕೀಲರಿಂದ</u>**

ನಾನು ನನ್ನ ಸಾಕ್ಷ್ಯವನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದ ವಿಷಯಗಳು ಸತ್ಯ ಮತ್ತು ನಿಜ ಇರುತ್ತದೆ ಆದ್ದರಿಂದ ಸದರಿ ನನ್ನ ಪ್ರಮಾಣ ಪತ್ರವನ್ನು ಮುಖ್ಯ ವಿಚಾರಣೆಯನ್ನಾಗಿ ಪರಿಗಣಿಸಬೇಕಾಗಿ ಪ್ರಾರ್ಥಿಸುತ್ತೇನೆ.

ಪ್ರತಿವಾದಿ ಕಂಪನಿಯು ನನಗೆ ನೀಡಿದ ಅಧಿಕಾರ ಪತ್ರವನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಗುರುತಿಸಿದ ಅಧಿಕಾರ ಪತ್ರವನ್ನು ನಿಶಾನೆ ಡಿ-12 ಎಂದು ಗುರುತಿಸಲಾಯಿತು. ಈ ಮೊದಲು ನಮ್ಮ ಕಂಪನಿಯ ಪರವಾಗಿ ಶಿವಾನಂದ ಪಾಟೀಲ್ ಇವರು ಸಾಕ್ಷ್ಯ ನುಡಿದಿದ್ದು, ಅವರು ಈಗ ಕಂಪನಿಯನ್ನು ಬಿಟ್ಟು ಹೋದ ಕಾರಣ, ನಾನು ಇಂದು ನ್ಯಾಯಾಲಯಕ್ಕೆ ಬಂದಿರುತ್ತೇನೆ. ಸಾಕ್ಷಿಯು ಡಿ.ಡಬ್ಲ್ಯೂ -1 ಪರವಾಗಿ ಗುರುತಿಸಲಾದ ನಿಶಾನೆ ಡಿ-1 ರಿಂದ ಡಿ-11 ದಾಖಲೆಗಳನ್ನು ಗುರುತಿಸಿ ತಮ್ಮ ಸಾಕ್ಷ್ಯಕ್ಕೆ ಅಳವಡಿಸಿಕೊಳ್ಳುತ್ತಾರೆ.

(ಈ ಹಂತದಲ್ಲಿ ವಾದಿ ಪರ ವಕೀಲರು ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ. ಹೇ . ಕೇ. ಸರಿ ಇದೆ.

ಸಿವಿಲ್ ನ್ಯಾಯಾಧೀಶರು, ಚಿತ್ತಾಪೂರ.